has taken up this issue and they are getting the raw material directly from the Hindustan Steel and they are supplying the material to small scale industries in the various parts of the State.

Roads taken over by P.W D. in some Hoblies of Magadi Taluk

581. Sri C. R. RANGE GOWDA (Magadi).—

Will the Minister for Public Works be pleased to state :—

(*a*) the length of each road taken over by the Public Works Department in the year 1966-67, 1967-68 and 1968-69 in Solur, Thippasandra and Kudur Hoblies of Magadi Taluk each year ;

(*b*) the length of each road taken over by the Public Works Department in the year 1966-67, 1967-68 and 1968-69 each year in Kasaba, Madabal and Tavarekere hoblies of Magadi Taluk;

(*c*) the policy and principles in taking over the road by the Public Works Department ?

Sri BASAVARAJ MAGAVI (Deputy Minister for Public Works).—

(*a*) *Vide* Statement–I appended.

(*b*) *Vide* Statement–II appended.

(*c*) Importance of the road, its public utility and the traffic needs.

STATEMENT I

Statement showing the roads and length taken over by the P.W.D. for maintenance during 1966–67, 1967–68 and 1968–69 in the Hoblies of Solur, Thippasandra and Kudur.

Hobli	Year	Nomenclature	Length
1	2	3	4
			M.F.
Solur	1966–67	Nil	...
	1967–68	(i) Road to Ranganathaswamy Temple.	...
		(ii) Road from Solur to Ranganathaswamy Temple *via* Kollapura, Somadevanahally, Bylakere and Magashettyhally.	2–0
	1968–69	Nil	

(SRI BASAVARAJ MAGAVI)

1	2	3	4
			M.F.
Thippasandra	1966-67	Nil	...
	1967-68	Road beyond Yellapura to join the Bangalore—Mangalore road *via* Hullanahally road, Sankigatta, Hosalaya, Halelaya and Thippasandra.	7-4
	1968-69	Nil	...
Kudur	1966-67	Nil	...
	1967-68	Road to Mahantheswaraswamy Gaddige.	2-0
	1968-69	Nil	

STATEMENT II

Statement showing the roads and length taken over by the Public Works Department during 1966-67, 1967-68 and 1968-69 in the Hoblies of Kasaba. Madabal and Thavarekere.

Hobli	Year	Nomenclature	Length
			M.F.
Kasaba	1966-67	Nil ...	...
	1967-68	Road from Solur to Ranganathaswamy Temple *via* Kollapura, Somadevanahalli, Bylakere and Nagashettihalli.	10-0
	1968-69	Nil	...

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ 6 ಹೋಬಳಿಗಳು ಇದ್ದು ಎರಡು ಕ್ಷೇತ್ರಗಳು ಇವೆ. ಒಂದು ಕ್ಷೇತ್ರದಲ್ಲಿ 23 ಮೈಲಿ ಮಾತ್ರ ತೆಗೆದುಕೊಂಡಿದ್ದೀರಿ, ಇನ್ನೊಂದು ಕ್ಷೇತ್ರವನ್ನು ಪೂರ್ತಿಯಾಗಿ ನಿರ್ಲಕ್ಷ್ಯ ಮಾಡಿದ್ದೀರಿ ಇದಕ್ಕೆ ಕಾರಣವೇನು ?

†ಶ್ರೀ ಬಸವರಾಜ ಮಾಗಾವಿ.—ಈಗ ಹೊಸದಾಗಿ ಪಿ. ಡಬ್ಲ್ಯು. ಡಿ. ಗೆ ರಸ್ತೆಗಳನು ತೆಗೆದು ಕೊಳ್ಳದಾರದು, ಈಗಾಲೇ 15 ಸಾವಿರ ಚಿಲ್ಲರೆ ರಸ್ತೆಗಳನ್ನು ತೆಗೆದುಕೊಂಡಿದ್ದೇವೆ ಅವುಗಳನ್ನೇ ನುಸ್ತಿತಿಯಲ್ಲಡುವುದಕ್ಕೆ ಸಾಧ್ಯವಾಗಿಲ್ಲ ಎಂಬ ಕಾರಣದಿಂದ ಮೇರೆ ಹೇಳಿದ ರೀತಿಯಲ್ಲಿ ನಿರ್ಣಯ ಮಾಡಿದ ಕಾರಣ ಹೆಚ್ಚಿನ ರಸ್ತೆಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ನನ್ನ ಪ್ರಶ್ನೆ ಮೂರು ಹೋಬಳಿಗಳನ್ನು ಪೂರ್ತಿಯಾಗಿ ನಿರ್ಲಕ್ಷ್ಯ ಮಾಡಿದ್ದೀರಿ ಇದಕ್ಕೆ ಕಾರಣವೇನು ಎಂದರೆ ತಾವು ಅನುಸರಿಸುತ್ತಿರುವ ನೀತಿಯ ವಿಚಾರ ಹೇಳುತ್ತಾ ಇದ್ದೀರಿ. ಈ ರೀತಿ ನಿರ್ಲಕ್ಷ್ಯ ಮಾಡುವುದಕ್ಕೆ ಇದ್ದ ಪ್ರಬಲವಾದ ಕಾರಣವೇನು ?

ಶ್ರೀ ಬಸವರಾಜ ಮಾಗಾವಿ.—ನಾವು ರಸ್ತೆಗಳನ್ನು ಹೋಬಳಿವಾರು ತೆಗೆದುಕೊಳ್ಳುವುದಿಲ್ಲ, ಎಲ್ಲ ಅವಶ್ಯಕವೊ, ಎಲ್ಲಿ ಟ್ರಾಫಿಕ್ ಹೆಚ್ಚಾಗಿದೆಯೋ, ಎಲ್ಲ ಇಂಡಸ್ಟ್ರಿಯಲ್ ಏರಿಯಾ ಇದೆಯೋ ಮತ್ತು ಯಾವುದು ಪ್ರೇಕ್ಷಣೀಯ ಸ್ಥಳಗಳಾಗಿವೆಯೋ ಅಲ್ಲ ಮಾತ್ರ ತೆಗೆದುಕೊಳ್ಳುತ್ತೇವೆಯೆ ಹೊರತು ಹೋಬಳಿವಾರು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಸರ್ಕಾರದವರು ಉತ್ತರವನ್ನು ಕೊಡುವಾಗ ಸ್ವಲ್ಪ ಕೂಲಂಕಷವಾಗಿ ವಿಮರ್ಶೆಮಾಡಿ ನೋಡಿ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು. ನಾನು ಈಗ ಹೇಳಿದ ಸ್ಥಳಗಳೆಲ್ಲಾ ಮಾಗಡಿ ಟೌನಿಗೆ ಬಹಳ ಸಮೀಪದಲ್ಲೇ ಇರತಕ್ಕ ರಸ್ತೆಗಳು. ಅಲ್ಲಿ ಮಂತ್ರಿಗಳು ತಿಳಿಸಿದಂತೆ ಆ ಪಬ್ಲಿಕ್ ಯುಟಿಲಿಟಿ, ಪಬ್ಲಿಕ್ ಇಂಪಾರ್ಟೆನ್ಸ್ ಮತ್ತು ಪಬ್ಲಿಕ್ ಟ್ರಾಫಿಕ್ ಎಲ್ಲಾ ಹೆಚ್ಚಿಗೆ ಇರುತ್ತೆಂಬುದನ್ನೇ ನೋಡಿ ನಾನು ಕೇಳಿದ್ದುದು. ಹಾಗಾದರೆ ಮಂತ್ರಿಗಳ ಅಭಿಪ್ರಾಯದಲ್ಲಿ ಅಲ್ಲ ತಾವು ಹೇಳಿದ ಕಂಡೀಷನ್‌ಗಳನ್ನು ಈಡೇರಿಸತಕ್ಕ ರಸ್ತೆಗಳೊಂದೂ ಇಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ನನಗೆ ತಿಳಿದಮಟ್ಟಿಗೆ ಇಲ್ಲ.

ಶ್ರೀ ಸೋಲೂರು ಸಿದ್ದಪ್ಪ.—ಆ ಕುದೂರಿನ ರಸ್ತೆಯಲ್ಲಿ ಬಸ್ ಟ್ರಾಫಿಕ್ ಬಹಳ ಇದೆ ಎಂದಲ್ಲವೇ ಆ ರಸ್ತೆಯನ್ನು ತೆಗೆದುಕೊಂಡಿರುವುದು ?

ಶ್ರೀ ಬಸವರಾಜ ಮಾಗಾವಿ.—ಹೌದು.

ಶ್ರೀ ಸಿ. ಆರ್. ರಂಗೇಗೌಡ.—ಹಿಂದೆ ಶ್ರೀ ವೀರೇಂದ್ರಪಾಟೀಲರು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದಾಗ ಅಲ್ಲಿ ಟೂರಿಸ್ಟ್ ಇಂಪಾರ್ಟೆನ್ಸ್ ಇದೆ, ಅದುದರಿಂದ ಆ ರಂಗನಾಥಸ್ವಾಮಿ ದೇವಾಲಯಕ್ಕೆ 2 ಫರ್ಲಾಂಗ್ ರಸ್ತೆಯನ್ನು ಮಾಡಿಸಿಕೊಡಬೇಕೆಂದು ಕೇಳಿದ್ದೆನು. ಅವರು ಅದನ್ನು ಮಾಡಿಕೊಡುವುದಾಗಿ ಭರವಸೆಯನ್ನೂ ಕೂಡ ಕೊಟ್ಟಿದ್ದರು. ಈಗ ಅದನ್ನು 2 ಮೈಲು ಎಂದು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಅದು ಕೇವಲ 2 ಫರ್ಲಾಂಗ್ ಮಾತ್ರ ಇದೆ. ಅದನ್ನು ಮಾಡಿಸದೆ ಇನ್ನು ಯಾವುದೋ ಒಂದು ರಂಗನಾಥ ದೇವಸ್ಥಾನಕ್ಕೆ ರಸ್ತೆ ಮಾಡುತ್ತಿದ್ದಾರೆ. ಅದ್ದರಿಂದ ಸ್ಥಳ ಪರಿಶೀಲನೆ ಮಾಡಿ ನಾನು ಹೇಳಿದ ದೇವಸ್ಥಾನಕ್ಕೆ ಕೂಡಲೆ ರಸ್ತೆಯನ್ನು ಮಾಡಿಸಿ ಕೊಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಅದನ್ನು ತೋರಿಸಿದರೆ ಅದನ್ನು ಮಾಡಿಸೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾಗಡಿಯ ತಾಲ್ಲೂಕಿನಲ್ಲಿ ಮುಳ್ಳಿ ತಿಮ್ಮಯ್ಯನಪಾಳ್ಯದ ಬಳಿ ಹೋಗತಕ್ಕ ರಸ್ತೆಯನ್ನು ಪಿ. ಡಬ್ಲ್ಯು. ಡಿ. ಅವರು ತೆಗೆದುಕೊಂಡು 5–6 ವರ್ಷಗಳ ಮೇರಾಯಿತು. ಅಲ್ಲಿ ಇನ್ನೂ ಒಂದು ಮೈಲು ರಸ್ತೆ ಕೆಲಸ ಮಾಡದೆ ಹಾಗೇ ನಿಂತು ಹೋಗಿದೆ, ಅದನ್ನು ಬೇಗ ಮುಗಿಸುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಬೇಗ ಮಾಡಿಸುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಬೆಂಗಳೂರಿಂದ ಮಾಗಡಿಗೆ ಬರುವಾಗ ಅಲ್ಲಿ ತಿರುಮಳೆ ಎಂದಿದೆ. ಅದು ಬಹಳ ಪವಿತ್ರವಾದ ಸ್ಥಳ. ಅಲ್ಲಿರತಕ್ಕ ರಂಗನಾಥದೇವಸ್ಥಾನಕ್ಕೆ 2 ಫರ್ಲಾಂಗ್ ರಸ್ತೆಯನ್ನು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ತೋರಿಸಿ ಮಾಡೋಣ.